ಅ.ದಾ. ನಂ. 45/2023 ಪಿ .ಡಬ್ಲ್ಯೂ-2

ದಿನಾಂಕಃ 20-09-2025 ರಂದು ಪಿ.ಡಬ್ಲ್ಯೂ-2 ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. ಅವರು ತಮ್ಮ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಪಿ.ಡಬ್ಲ್ಯೂ-2 ಅವರ ಮುಖ್ಯ ವಿಚಾರಣೆಯಾಗಿ ಪರಿಗಣಿಸಲು ಕೋರಿದ್ದು ಅವರ ಕೋರಿಕೆಯನ್ನು ಮನ್ನಿಸಲಾಯಿತು.

ಮುಖ್ಯ ವಿಚಾರಣೆಃ ಎ ಎಸ್ ಪಿ ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದಲ್ಲಿರುವ ಅಂಶಗಳನ್ನು ಸತ್ಯವಾಗಿರುತ್ತದೆ, ಅದಕ್ಕೆ ನಾನು ನನ್ನ ಸಹಿ ಮಾಡಿರುತ್ತೇನೆ.

**ಪಾಟೀ ಸವಾಲು ಸಸಅ ರವರಿಂದಃ**

ನಿಮ್ಮ ಜನ್ಮ ದಿನಾಂಕ ಪ್ರಮಾಣ ಪತ್ರ ಮತ್ತು ಶಾಲಾ ದಾಖಲಾತಿಯನ್ನು ಹಾಜರುಪಡಿಸಿದ್ದೀರ ಎಂದರೆ ಇಲ್ಲ. ನಾನು 10ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ತಂದೆಯ ಶಾಲಾ ದಾಖಲಾತಿಯನ್ನು ಹಾಜರುಪಡಿಸಿದ್ದೀರ ಎಂದರೆ ವರ್ಗಾವಣೆ ಪ್ರಮಾಣ ಪತ್ರ ಹಾಜರುಪಡಿಸಿದ್ದೇನೆ. ಸದರಿ ವರ್ಗಾವಣೆ ಪ್ರಮಾಣ ಪತ್ರವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂಗಿಯ ದಾಖಲಾತಿಗಳಲ್ಲಿ ತಂದೆ ಹೆಸರು ತಪ್ಪಾಗಿ ನಮೂದಾಗಿರುವುದು ಯಾವಾಗ ತಿಳಿದು ಬಂದಿರುತ್ತದೆ ಎಂದರೆ ಇತ್ತೀಚೆಗೆ ಕೆಲಸಕ್ಕೆ ಸೇರಿಸುವಾಗ ತಿಳಿದು ಬಂದಿರುತತದೆ. ಬಸವರಾಜು ಮತ್ತು ಹೆಚ್ ಪಿ ಧರಣೇಂದ್ರಯ್ಯ ರವರು ಇಬ್ಬರೂ ಒಂದೇ ವ್ಯಕ್ತಿ ಎಂದು ತೋರಿಸಲು ದಾಖಲಾತಿ

ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಶಾಲಾ ದಾಖಲಾತಿಗಳಲ್ಲಿ ನನ್ನ ತಂದೆಯ ಹೆಸರು ಬಸವರಾಜು ಎಂದು ಇರುವ ಕಾರಣ ಅದನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂಗಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಶ್ರೀಮತಿ ಸ್ನೇಹಾ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಆಲೂರು.